# ಕರ್ನಾಟಕ ಲೋಕಾಯುಕ್ತ

**ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-7195/2014/ಡಿಆರ್‌ಇ-1**

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 12/9/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ.ಎಸ್.ಆರ್.ಬಸವರಾಜಪ್ಪ ಬಿನ್ ಎಸ್.ಎಂ.ರುದ್ರಪ್ಪ, ವಡ್ಡರ ಸಿದ್ದವ್ವನಹಳ್ಳಿ, ಕಡ್ಲೇಗುದ್ದು ಅಂಚೆ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ, ಇವರು ಸಲ್ಲಿಸಿರುವ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ವರದಿಯನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

******

1. ಶ್ರೀ.ಎಸ್.ಆರ್.ಬಸವರಾಜಪ್ಪ ಬಿನ್ ಎಸ್.ಎಂ.ರುದ್ರಪ್ಪ, (ಹಾಲಿ ಮೃತಪಟ್ಟಿರುತ್ತಾರೆ) ವಾರಸುದಾರರು ಶ್ರೀಮತಿ.ಶೈಲಾ ಕೋಂ ಎಸ್.ಆರ್.ಬಸವರಾಜಪ್ಪ, ವಡ್ಡರಸಿದ್ದವ್ವನಹಳ್ಳಿ, ಕಡ್ಲೇಗುದ್ದು ಅಂಚೆ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀಮತಿ.ಎಸ್.ಪಿ.ಅನುಸೂಯಮ್ಮ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಆಲಗಟ್ಟ ಗ್ರಾಮಪಂಚಾಯಿತಿ (ಹಾಲಿ ನಿವೃತ್ತ), (2) ಶ್ರೀಮತಿ.ರತ್ನಮ್ಮ, ಅಧ್ಯಕ್ಷರು, ಆಲಗಟ್ಟ ಗ್ರಾಮಪಂಚಾಯಿತಿ, (3) ಶ್ರೀ.ಕರಿಯಪ್ಪ, ಗ್ರಾಮಪಂಚಾಯಿತಿ ಸದಸ್ಯರು, ಆಲಗಟ್ಟ ಗ್ರಾಮಪಂಚಾಯಿತಿ ಮತ್ತು (4) ಶ್ರೀ.ರುದ್ರಮುನಿ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಚಿತ್ರದುರ್ಗ, ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರು ತಮ್ಮ ದೂರಿನಲ್ಲಿ ಚಿತ್ರದುರ್ಗ ಜಿಲ್ಲೆ ಮತ್ತು ತಾಲ್ಲೂಕು ಅಲಘಟ್ಟ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಒಡ್ಡರ ಸಿದ್ದವ್ವನಹಳ್ಳಿ ಗ್ರಾಮದಲ್ಲಿ ದೂರುದಾರರ ತಾತನ ಹೆಸರಿಗೆ ಖಾತೆ ಇರುವ ಜಾಗದಲ್ಲಿ ಅದು ಗ್ರಾಮಠಾಣಾ ಜಾಗವೆಂದು ದಾಖಲೆ ಸೃಷ್ಟಿ ಮಾಡಿಕೊಂಡು ಪುಷ್ಪ ಕೋಂ ತಿಮ್ಮಪ್ಪ ಎಂಬುವರು ಸರ್ಕಾರದಿಂದ ಮನೆಯನ್ನು ಮಂಜೂರು ಮಾಡಿಸಿಕೊಂಡಿರುತ್ತಾರೆ. ಸದರಿ ಜಾಗದಲ್ಲಿ ಶರಣಪ್ಪ ಬಿನ್ ಹನುಮಪ್ಪ ಎಂದು ಪಂಚಾಯಿತಿಯಲ್ಲಿ ಖಾತೆ ಮಾಡಿಸಿಕೊಂಡು ತಡೆಗೋಡೆಯನ್ನು ಕಟ್ಟಿ ಅದರೊಳಗಡೆ ತಿಮ್ಮಪ್ಪ ಬಿನ್ ಹನುಮಪ್ಪ ಇವರ ಹೆಂಡತಿಗೆ 3ನೇ ಮನೆಯನ್ನು ಮಂಜೂರು ಮಾಡಿಸಿಕೊಂಡಿದ್ದಾರೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3. ದೂರುದಾರರ ದೂರಿನ ಬಗ್ಗೆ ವಿಚಾರಣೆ ನಡೆಸಿ ವರದಿ ನೀಡುವಂತೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಚಿತ್ರದುರ್ಗ ಇವರಿಗೆ ಆದೇಶಿಸಲಾಗಿತ್ತು. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಚಿತ್ರದುರ್ಗ ಇವರು ವರದಿಯನ್ನು ಸಲ್ಲಿಸಿದ್ದು, ತನ್ನ ವರದಿಯಲ್ಲಿ ಶ್ರೀ.ಎಸ್.ಆರ್.ಬಸವರಾಜಪ್ಪ ಬಿನ್ ಎಸ್.ಎಂ.ರುದ್ರಪ್ಪ, ಒಡ್ಡರ ಸಿದ್ದವ್ವನಹಳ್ಳಿ, ಆಲಘಟ್ಟ ಗ್ರಾಮಪಂಚಾಯಿತಿ ಇವರು ತಿಳಿಸಿದಂತೆ ಅಕ್ರಮ ಖಾತೆಗಳಾಗಲೀ, ಮನೆಯನ್ನು ನೀಡಿದವರಿಗೆ ಮತ್ತೊಮ್ಮೆ ಮನೆಯನ್ನು ನೀಡಿದ್ದು ಫಲಾನುಭವಿಗಳಾಗಲೀ ಯಾರೂ ಇರುವುದಿಲ್ಲ. ಆದ್ದರಿಂದ ಪ್ರಕರಣವನ್ನು ಮುಕ್ತಾಯಗೊಳಿಸಲು ಕೋರಿದೆಯೆಂದು ವರದಿ ನೀಡಿರುತ್ತಾರೆ.

4. ವಿಚಾರಣಾ ವರದಿಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ಸುಳ್ಳು ಮಾಹಿತಿಯನ್ನು ನೀಡಿರುತ್ತಾರೆ. ಅವರು ದಾಖಲಿಸಿರುವ ದೂರನ್ನು ಓಂಬಡ್ಸ್‌ಮೆನ್ ಇವರು ತನಿಖೆ ನಡೆಸಿ ದೂರು ಸಂ.14/2014-15 ರಲ್ಲಿ ಆದೇಶ ನೀಡಿರುತ್ತಾರೆ. ಸದರಿ ಕಡತವನ್ನು ಪರಿಶೀಲನೆ ನಡೆಸಬೇಕು. ಓಂಬಡ್ಸ್‌ಮೆನ್ ದೂರು ಸಂ.14/14-15 ಕಡತ ತರಿಸಿಕೊಂಡು ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿರುತ್ತಾರೆ.

5. 1 ರಿಂದ 3ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ಅವರು ಅಲಘಟ್ಟ ಗ್ರಾಮಪಂಚಾಯಿತಿಯಲ್ಲಿ ಸೇವೆ ಸಲ್ಲಿಸುವಾಗ ಹೊಸದಾಗಿ ಯಾವ ಖಾತೆಗಳನ್ನು ಮಾಡಿರುವುದಿಲ್ಲ ಮತ್ತು ಯಾವುದೇ ರೀತಿಯ ಕಾನೂನುಬಾಹಿರ ಕೆಲಸಗಳನ್ನು ಮಾಡಿರುವುದಿಲ್ಲ. ಒಡ್ಡರ ಸಿದ್ದವ್ವನಹಳ್ಳಿ ಗ್ರಾಮದಲ್ಲಿ ಅಕ್ರಮವಾಗಿ ತಡೆಗೋಡೆ ಮತ್ತು ಒಕ್ಕಲು ಕಣ ಮತ್ತು ಕಳಪೆ ರಸ್ತೆಗಳ ಕಾಮಗಾರಿಗಳು ಸಮರ್ಪಕವಾಗಿರುತ್ತವೆಯೆಂದು ಹೇಳಿರುತ್ತಾರೆ.

6. 4ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ 2012-13ನೇ ಸಾಲಿನಲ್ಲಿ ಆಲಘಟ್ಟ ಪಂಚಾಯಿತಿ ವಡ್ಡರಸಿದ್ದವ್ವನಹಳ್ಳಿ ಗ್ರಾಮ ಠಾಣಾ ಜಾಗದಲ್ಲಿ ತಡೆಗೋಡೆ ನಿರ್ಮಾಣ ಮಾಡಿರುವುದು, ಕಾಮಗಾರಿ ದಿ.15/2/2013 ರಲ್ಲಿ ಪ್ರಾರಂಭ ಮಾಡಿ ದಿ.28/2/2013 ರಲ್ಲಿ ಮುಕ್ತಾಯವಾಗಿರುತ್ತದೆ. ಕೆಲಸಗಾರರಿಗೆ ಈಗಾಗಲೇ ಎನ್.ಎಂ.ಆರ್.ಗಳ ಸಂಖ್ಯೆ 2481, 2482 ರಲ್ಲಿ ಒಟ್ಟು 561 ಮಾನವ ದಿನಗಳು ಸೃಷ್ಟಿ ಮಾಡಿ ಕೂಲಿ ರೂ.86,955/- ನ್ನು ಅವರ ಬ್ಯಾಂಕ್ ಖಾತೆಗಳಿಗೆ ಪಾವತಿ ಮಾಡಿದೆ. ಈ ಬಗ್ಗೆ ಅಳತೆ ಪುಸ್ತಕ ನಂ.1781 ಪುಟ ಸಂ.1 ರಲ್ಲಿ ನಮೂದಿಸಿದೆ. ಸಾಮಾಗ್ರಿ ಬಿಲ್‌ನ್ನು ದಿ.16/2/18 ರಲ್ಲಿ ರೂ.58,105/- ಗಳನ್ನು ಗುತ್ತಿಗೆದಾರ ಇ.ನಾಗರಾಜ್‌ರವರಿಗೆ ಪಾವತಿ ಮಾಡಲಾಗಿರುತ್ತದೆ. ದಿ.12/2/13 ರಿಂದ ದಿ.28/2/13 ರವರೆಗೂ ಕೂಲಿಕಾರರು ತಡೆಗೋಡೆ ನಿರ್ಮಾಣ ಮಾಡುವಾಗ ತಕರಾರು ಮಾಡದೆ ದಿ.30/6/14 ರಲ್ಲಿ ತಕರಾರನ್ನು ಮಾಡಿರುವುದು ಸಮಂಜಸವಾಗಿರುವುದಿಲ್ಲ. ಎಲ್ಲಾ ಕೂಲಿಕಾರರಿಗೂ ಕೂಲಿ ತಲುಪಿದ್ದು, ದೂರಿಗೆ

ಗ್ರಾಮಪಂಚಾಯಿತಿಯವರು ನೇರ ಹೊಣೆಗಾರರಾಗಿರುತ್ತಾರೆ. ಅವರ ಗಮನಕ್ಕೆ ಬಾರದೆ ಆಗಿರುವ ಕೃತ್ಯವೆಂದು ಹೇಳಿರುತ್ತಾರೆ.

7. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಇವರು ತನ್ನ ವರದಿಯಲ್ಲಿ ದೂರುದಾರರ ದೂರಿನಲ್ಲಿರುವ ಅಂಶಗಳು ಸತ್ಯಕ್ಕೆ ದೂರವಾಗಿರುತ್ತವೆ ಎಂದು ವರದಿಯನ್ನು ನೀಡಿದ್ದರೂ ಸಹ ದೂರುದಾರರು ತನ್ನ ಪ್ರತ್ಯುತ್ತರದ ಜೊತೆ ಹಾಜರು ಪಡಿಸಿರುವ ಓಂಬಡ್ಸ್‌ಮೆನ್ ಕಾರ್ಯಾಲಯದ ದೂರಿನ ಸಂ.14/2014-15 ಪ್ರಕರಣದಲ್ಲಿ ಆದ ಆದೇಶವನ್ನು ಪರಿಶೀಲಿಸಿದಾಗ, ಅಲಘಟ್ಟ ಗ್ರಾಮಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅಧ್ಯಕ್ಷರು ಮತ್ತು ಚಿತ್ರದುರ್ಗ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಹಣ ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ಅವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಸೂಚಿಸಿರುವುದು ಕಂಡುಬರುತ್ತದೆ. ಆದ್ದರಿಂದ,

ಎ) ಓಂಬಡ್ಸ್‌ಮೆನ್‌ರವರ ಸೂಚನೆಯ ಮೇರೆಗೆ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಏನು ಕ್ರಮ ಕೈಗೊಳ್ಳಲಾಗಿದೆಯೆನ್ನುವ ಬಗ್ಗೆ ವರದಿ ನೀಡುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿತ್ರದುರ್ಗ ಇವರಿಗೆ ಆದೇಶಿಸಲಾಗಿತ್ತು.

ಬಿ) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಚಿತ್ರದುರ್ಗ ಇವರು ಹಾಜರು ಪಡಿಸಿರುವ ಕರ ಆಕರಣೆಯ ರಿಜಿಸ್ಟರ್‌ನ್ನು ಪರಿಶೀಲಿಸಿದಾಗ, ಪುಷ್ಪ ಕೋಂ ತಿಮ್ಮಪ್ಪ ಎಂಬುವರ ಹೆಸರಿನಲ್ಲಿ 2 ಸ್ವತ್ತುಗಳು ದಾಖಲಾಗಿರುವುದು ಮತ್ತು ತಿಮ್ಮಪ್ಪ ಎನ್ನುವರ ಹೆಸರಿಗೆ ಸ್ವತ್ತು ದಾಖಲಾಗಿರುವುದು ಕಂಡುಬರುತ್ತದೆ. ಅದನ್ನು ಗಮನಿಸಿದಾಗ, ಸದರಿ ಸ್ವತ್ತುಗಳು ಯಾವ ಆಧಾರದಲ್ಲಿ ಅವರಿಗೆ ಮಂಜೂರಾಗಿದೆ ಮತ್ತು ದೂರುದಾರರು ಮಾಡಿರುವ ಆಪಾದನೆಗೂ ಸದರಿ ಸ್ವತ್ತಿಗೂ ಏನಾದರೂ ಸಂಬಂಧವಿದೆಯೇ ಎನ್ನುವುದರ ಬಗ್ಗೆ ವಿಚಾರಣೆ ನಡೆಸುವುದು ಸೂಕ್ತವೆನಿಸುತ್ತದೆ. ಆದ್ದರಿಂದ, ದೂರುದಾರರ ದೂರು, ಪ್ರತ್ಯುತ್ತರ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಚಿತ್ರದುರ್ಗ ಇವರು ವರದಿಯ ಜೊತೆ ಕಳುಹಿಸಿರುವ ದಾಖಲಾತಿಗಳ ಪ್ರತಿಗಳನ್ನು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗ ಇವರಿಗೆ ಕಳುಹಿಸಿ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಆದೇಶಿಸಲಾಗಿತ್ತು.

8. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಚಿತ್ರದುರ್ಗ ಜಿಲ್ಲಾ ಪಂಚಾಯತ್ ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಚಿತ್ರದುರ್ಗ ತಾಲ್ಲೂಕಿನ ಸಿದ್ದವ್ವನಹಳ್ಳಿ ಗ್ರಾಮದಲ್ಲಿ ದೂರುದಾರರ ತಾತನ ಹೆಸರಿಗೆ ಖಾತೆ ಇರುವ ಜಾಗದಲ್ಲಿ ಗ್ರಾಮ ಠಾಣಾ ಜಾಗವೆಂದು

ದಾಖಲೆ ಸೃಷ್ಟಿಸಿ, ಪುಷ್ಪ ಕೋಂ ತಿಮ್ಮಪ್ಪ ಎಂಬುವರು ಸರ್ಕಾರದಿಂದ ಮನೆಯನ್ನು ಮಂಜೂರು ಮಾಡಿಸಿಕೊಂಡಿರುತ್ತಾರೆ ಎಂದು ಆರೋಪಿಸಿರುವ ಬಗ್ಗೆ ಓಂಬಡ್ಸ್‌ಮನ್ ಕಾರ್ಯಾಲಯದ ದೂರಿನ ಸಂ.14/2014–15 ಪ್ರಕರಣದಲ್ಲಿ ಆದ ಆದೇಶದನ್ವಯ ಜಿಲ್ಲಾ ಪಂಚಾಯಿತಿ ಕಾರ್ಯಾಲಯದಿಂದ ದಿ.7/11/14 ರಲ್ಲಿಯೇ ಆದೇಶ ಹೊರಡಿಸಿದ್ದು, ಒಟ್ಟು ರೂ.42,676/– ಗಳನ್ನು (ಅಲಘಟ್ಟ ಗ್ರಾಮಪಂಚಾಯಿತಿಯ ಅಂದಿನ ಪಿ.ಡಿ.ಓ ಶ್ರೀಮತಿ.ಅನಸೂಯಮ್ಮರಿಂದ ರೂ.21,338/– ಹಾಗೂ ಅಂದಿನ ಗ್ರಾಮಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ.ರತ್ನಮ್ಮರಿಂದ ರೂ.21,338/– ರಂತೆ) ಮತ್ತು ರೂ.1,45,060/– ಗಳನ್ನು (ಅಂದಿನ ಪಿ.ಡಿ.ಓ, ಶ್ರೀಮತಿ.ಅನಸೂಯಮ್ಮರಿಂದ ರೂ.48,353/–, ಅಂದಿನ ಗ್ರಾಮಪಂಚಾಯಿತಿಯ ಅಧ್ಯಕ್ಷರಾದ ಶ್ರೀಮತಿ.ರತ್ನಮ್ಮರಿಂದ ರೂ.48,353/– ಹಾಗೂ ಅಂದಿನ ಚಿತ್ರದುರ್ಗ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ.ರುದ್ರಮುನಿ ರಿಂದ ರೂ.48,353/– ರಂತೆ) ವಸೂಲ್ಮಾಡಲು ಆದೇಶಿಸಲಾಗಿರುತ್ತದೆ. ಕಾರ್ಯನಿರ್ವಾಹಕ ಅಧಿಕಾರಿಯವರಿಂದ ವರದಿ ಸ್ವೀಕೃತವಾಗಿರುವುದಿಲ್ಲ. ಆದ್ದರಿಂದ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಚಿತ್ರದುರ್ಗ ಇವರಿಂದ ಪರಿಶೀಲನಾ ವರದಿ ಪಡೆದು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ.

9. ಮುಂದುವರೆದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿತ್ರದುರ್ಗ ಇವರು ಮೊತ್ತವನ್ನು ವಸೂಲು ಮಾಡುವ ಬಗ್ಗೆ ಕ್ರಮ ಕೈಗೊಂಡು ವರದಿ ಸಲ್ಲಿಸುವಂತೆ ಕೋರಿ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಚಿತ್ರದುರ್ಗ ಇವರಿಗೆ ಬರೆದಿರುವ ಪತ್ರದ ಪ್ರತಿಯನ್ನು ಹಾಜರು ಪಡಿಸಿರುತ್ತಾರೆ.

10. ಮೇಲಿನ ಅಂಶವನ್ನು ಗಮನಿಸಿದಾಗ, 1ನೇ ಎದುರುದಾರರಾದ ಅನಸೂಯಮ್ಮ ಇವರು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯದಲ್ಲಿದ್ದು, ಹಣ ದುರುಪಯೋಗ ಪಡಿಸಿಕೊಂಡಿರುವ ಅಂಶ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿತ್ರದುರ್ಗ ಇವರ ವರದಿಯಲ್ಲಿ ಕಂಡುಬರುತ್ತದೆ. ಅದೇರೀತಿ 4ನೇ ಎದುರುದಾರರಾದ ರುದ್ರಮುನಿ ಇವರು ತಾಲ್ಲೂಕು ಪಂಚಾಯಿತಿ ಅಧಿಕಾರಿಯಾಗಿ ಕರ್ತವ್ಯದಲ್ಲಿದ್ದು, ಹಣ ದುರುಪಯೋಗ ಪಡಿಸಿಕೊಂಡಿರುವ ಅಂಶ ಕಂಡುಬರುತ್ತದೆ. 1ನೇ ಎದುರುದಾರರು ಹಣ ದುರುಪಯೋಗ ಪಡಿಸಿಕೊಂಡ ಬಗ್ಗೆ ಅವರಿಂದ ರೂ.21,338/– ನ್ನು ವಸೂಲು ಮಾಡಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆದೇಶಿಸಿರುವುದು ಕಂಡುಬರುತ್ತದೆ. 4ನೇ ಎದುರುದಾರರು ಹಣ ದುರುಪಯೋಗ ಪಡಿಸಿಕೊಂಡ ಬಗ್ಗೆ ಅವರಿಂದ ರೂ.48,353/– ನ್ನು ವಸೂಲು ಮಾಡಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆದೇಶಿಸಿರುವುದು ಕಂಡುಬರುತ್ತದೆ.

11. 2ನೇ ಎದುರುದಾರರಾದ ರತ್ನಮ್ಮ, ಗ್ರಾಮಪಂಚಾಯಿತಿ ಅಧ್ಯಕ್ಷರು ಹಾಗೂ 3ನೇ ಎದುರುದಾರರಾದ ಕರಿಯಪ್ಪ, ಗ್ರಾಮಪಂಚಾಯಿತಿ ಸದಸ್ಯರು ಇವರುಗಳು ಕೂಡ ಹಣವನ್ನು ದುರುಪಯೋಗ ಪಡಿಸಿಕೊಂಡಿರುವುದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ವರದಿಯಲ್ಲಿ ಕಂಡುಬರುತ್ತದೆ. ಆದರೆ ಈವರೆಗೂ 1 ರಿಂದ 4ನೇ ಎದುರುದಾರರಿಂದ ಹಣವನ್ನು ವಸೂಲಿ ಮಾಡಿರುವುದು ಕಂಡುಬರುತ್ತಿಲ್ಲ. 2 ಮತ್ತು 3ನೇ ಎದುರುದಾರರು ಪಂಚಾಯತ್ ಅಧ್ಯಕ್ಷರಾಗಿ/ಸದಸ್ಯರಾಗಿ ಮುಂದುವರೆದಿದ್ದಲ್ಲಿ ಅವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯಡಿ ಸೂಕ್ತ ಕ್ರಮವನ್ನು ಕೂಡ ಕೈಗೊಳ್ಳಬೇಕಾಗುತ್ತದೆ.

12. ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, 1 ರಿಂದ 4ನೇ ಎದುರುದಾರರಿಂದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ವರದಿಯಲ್ಲಿ ಸೂಚಿಸಿರುವ ಮೊತ್ತವನ್ನು ವಸೂಲಿ ಮಾಡಲು ಹಾಗೂ 2 ಮತ್ತು 3ನೇ ಎದುರುದಾರರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯಡಿ ಸೂಕ್ತ ಕ್ರಮವನ್ನು ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 12/9

(ನ್ಯಾಯಮೂರ್ತಿ ಎನ್.ಆನಂದ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.